## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನಾ ಸಿದ್ಧಿ ಇವರು ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

**ಪ್ರಶ್ನೆ:-**

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹುತೇಕ ಬುಡಕಟ್ಟು ಜನಾಂಗದ ಹಳ್ಳಿಗಳು ಕಾಲೋನಿ ರೂಪದಲ್ಲಿ ಇರದೆ ಒಂದೊಂದೆ ಮನೆಗಳು ದೂರ ದೂರದಲ್ಲಿ ಇರುವುದರಿಂದ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಹತ್ತಿರದ ಹಳ್ಳ, ನದಿ, ಬೆಟ್ಟ ಮುಂತಾದವುಗಳಿಂದ ಬರುವ ನೀರನ್ನೇ ಕುಡಿಯಲು ಉಪಯೋಗಿಸುತ್ತಿದ್ದಾರೆ ಮತ್ತು ಅನೇಕ ಬಾರಿ ಬೇಸಿಗೆ ಸಂದರ್ಭದಲ್ಲಿ ನೀರಿಲ್ಲದಿದ್ದಾಗ ಸಮಸ್ಯೆಗಳು ಎದುರಾಗುತ್ತಿವೆ. ಹೀಗಾಗಿ ಸದರಿ ಜಿಲ್ಲೆಯ ಬುಡಕಟ್ಟು ಜನಾಂಗದ ಕುಡಿಯುವ ನೀರಿನ ಸಮಸ್ಯೆಗಾಗಿ ವಿಶೇಷ ಅನುದಾನ ಘೋಷಿಸಿ ಇವರಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಕುರಿತು ನಿಯಮ 72 ರಡಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಹೇಳಿಕೆ:-**

ಉತ್ತರ ಕನ್ನಡ ಜಿಲ್ಲೆಯ ಜಲ ಜೀವನ್ ಮಿಷನ್ ಯೋಜನೆಯಡಿ ಒಟ್ಟು 4 ಹಂತಗಳಲ್ಲಿ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರು ಕಲ್ಪಿಸಲು ಏಕಗ್ರಾಮ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಿದ್ದು, ಬುಡಕಟ್ಟು ಜನಾಂಗಗಳಿಗೆ ಸಂಬಂಧಿಸಿದಂತೆ 18,886 ಜನಸಂಖ್ಯೆಗೆ ಅನುಗುಣವಾಗಿ 4,840 ಮನೆಗಳಿಗೆ ಶುದ್ಧ ಕುಡಿಯವ ನೀರಿನ ಸಂಪರ್ಕ ಕಲ್ಪಿಸಲು ಗುರಿಯನ್ನು ರೂಪಿಸಲಾಗಿರುತ್ತದೆ.

ಏಕಗ್ರಾಮ ಕುಡಿಯುವ ನೀರಿನ ಯೊಜನೆಯಡಿ 10,644 ಹಾಗೂ ಈ ಕೆಳಕಂಡಂತೆ ಬಹುಗ್ರಾಮ ಕುಡಿಯುವ ನೀರಿನ ಯೊಜನೆಯಡಿ 8,242 ಬುಡಕಟ್ಟು ಜನಾಂಗದವರಿಗೆ ನೀರಿನ ವ್ಯವಸ್ಥೆ ಕಲ್ಪಿಸಲು ಉದ್ದೇಶಸಲಾಗಿದೆ. ಸದರಿ ಯೋಜನೆಗಳು ಪ್ರಗತಿಯಲ್ಲಿದ್ದು, ವಿವರಗಳು ಈ ಕೆಳಗಿನಂತಿವೆ.

| ಕ್ರ. ಸಂ | ಯೋಜನೆಯ ಹೆಸರು | ತಾಲ್ಲೂಕು | ಒಟ್ಟು ಜನಸಂಖ್ಯೆ | ಒಟ್ಟು ಮನೆಗಳ ಸಂಖ್ಯೆ | ಬುಡಕಟ್ಟು ಜನಾಂಗದ ಮನೆಗಳ ಸಂಖ್ಯೆ |
|---|---|---|---|---|---|
| 1 | ಕರ್ಕಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಹೊನ್ನಾವರ | 44,639 | 11,919 | 14 |
| 2 | ಗೋಟೆಗಾಳಿ ಮತ್ತು ಕೇರವಾಡಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಕಾರವಾರ | 80,322 | 22,064 | 31 |
| 3 | ತೇರಗಾವ್ ಮತ್ತು ಕಾವಲವಾಡ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಹಳಿಯಾಳ | 1,02,000 | 22,698 | 49 |
| 4 | ಪಾಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಮುಂಡಗೋಡ | 16,000 | 3,500 | 279 |
| 5 | ಬಾಚಣಕಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಮುಂಡಗೋಡ | 11,471 | 2,636 | 31 |
| 6 | ಶಿರಳ್ಳಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಭಟ್ಕಳ | 1,54,616 | 27,499 | 1,566 |
| 7 | ಬನವಾಸಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಶಿರಸಿ | 8,680 | 1,832 | 11 |

| ಕ್ರ. ಸಂ | ಯೋಜನೆಯ ಹೆಸರು | ತಾಲ್ಲೂಕು | ಒಟ್ಟು ಜನಸಂಖ್ಯೆ | ಒಟ್ಟು ಮನೆಗಳ ಸಂಖ್ಯೆ | ಬುಡಕಟ್ಟು ಜನಾಂಗದ ಮನೆಗಳ ಸಂಖ್ಯೆ |
|---|---|---|---|---|---|
| 8 | ಬದನ್‌ಗೋಡ್ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | ಶಿರಸಿ | 12,000 | 2,438 | 153 |
| 9 | ಹೊನ್ನಾವರ ಪಟ್ಟಣ ಮತ್ತು ಮಾರ್ಗ ಮಧ್ಯದ 9 ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿ | ಹೊನ್ನಾವರ | 47,500 | 11,843 | 4 |
| | **ಒಟ್ಟು** | | **4,77,228** | **1,06,429** | **2,138** |

ಮುಂದುವರೆದು, ಬುಡಕಟ್ಟು ಜನಾಂಗಕ್ಕೆ ಸಂಬಂಧಿಸಿದಂತೆ, ಒಟ್ಟು 175 ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 115 ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ. ಉಳಿದಂತೆ 56 ಕಾಮಗಾರಿಗಳು ಪ್ರಗತಿಯಲ್ಲಿದ್ದು 4 ಕಾಮಗಾರಿಗಳು ಅನುಷ್ಠಾನಗೊಳ್ಳುವ ಹಂತದಲ್ಲಿರುತ್ತದೆ. ಸದರಿ ಎಲ್ಲಾ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. ವಿವರಗಳು ಇಂತಿವೆ;

| ಕ್ರ. ಸಂ | ತಾಲ್ಲೂಕು | ಕಾಮಗಾರಿಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ | ಪ್ರಾರಂಭವಾಗದೇ ಇರುವ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| 1 | ಅಂಕೋಲಾ | 4 | 1 | 3 | 0 |
| 2 | ಬಟ್ಕಲ್ | 15 | 5 | 10 | 0 |
| 3 | ಹಳಿಯಾಳ್ | 14 | 13 | 1 | 0 |
| 4 | ಹೊನ್ನಾವರ | 9 | 1 | 7 | 1 |
| 5 | ಜೋಯಿಡಾ | 11 | 8 | 3 | 0 |
| 6 | ಕಾರವಾರ | 4 | 1 | 2 | 1 |
| 7 | ಕುಮುಟಾ | 0 | 0 | 0 | 0 |
| 8 | ಮುಂಡಗೋಡ್ | 56 | 49 | 7 | 0 |
| 9 | ಸಿದ್ದಾಪುರ | 5 | 4 | 1 | 0 |
| 10 | ಶಿರಸಿ | 14 | 8 | 5 | 1 |
| 11 | ಯಲ್ಲಾಪುರ | 43 | 25 | 17 | 1 |
| | **ಒಟ್ಟು** | **175** | **115** | **56** | **4** |

ಮೇಲೆ ವಿವರಿಸಿರುವಂತೆ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡ ನಂತರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲ್ಲಿದ್ದು, ಅಲ್ಲಿಯವರೆಗೆ ಬೇಸಿಗೆ ಕಾಲದಲ್ಲಿ ನೀರಿನ ಅಭಾವ ಉಂಟಾದ್ದಲ್ಲಿ ಟ್ಯಾಂಕರ್‌ಗಳ ಮೂಲಕ ಹಾಗೂ ಖಾಸಗಿ ಕೊಳವೆ ಬಾವಿಗಳಿಂದ ನೀರನ್ನು ಪೂರೈಸಲಾಗುತ್ತದೆ.

(ಪ್ರಿಯಾಂಕ್ ಖರ್ಗೆ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/168/2024-25